

ಜಪಾನಿನಲ್ಲಿ ವೈನ್ ಕಂಪೆನಿಗಳು ಕುಡುಕರನ್ನು ಸೆಳೆಯಲು ಮದ್ಯದ ಸ್ಪಾಗಳನ್ನೇ ತೆರೆದಿವೆ. ಕೊಳದಲ್ಲಿ ವೈನ್ ಸುರಿಯಲು ಕಂಪೆನಿಯ ಮಾಲೀಕರೇ ಬಾಟಲ್ ಹಿಡಿದು ಕಾದಿರುತ್ತಾರಂತೆ. ಛೆ, ಜಪಾನಿನಲ್ಲಾದರೂ ಹುಟ್ಟಬಾರದಿತ್ತೇ ಎಂದು ಬೇಸರವಾಗಿ ವೈನ್ ಸ್ಟೋರ್ ಕಡೆ ಸುಳಿಯುವ ಮುನ್ನ ಒಂದು ಮಾತು- ಇವೆಲ್ಲ ಡೇಟ್‌ಬಾರ್ ಆದ ವೈನ್.

ಪ್ಯಾರಿಸ್‌ನಲ್ಲಿ 'ಗೂಟದ ಚಪ್ಪಲಿಯಲ್ಲಿ ಓಟ' ಸ್ಪರ್ಧೆಗೆ ಸಿದ್ಧತೆ ನಡೆಯುತ್ತಿದೆ. ಎಲ್ಲಾ 96 ಸ್ಪರ್ಧಿಗಳಿಗೆ ಶೂ ಖರೀದಿಸಲು ಊಟ, ತಿಂಡಿ ಬಿಡುವಷ್ಟು ಹುಚ್ಚು. ಗೆದ್ದವರಿಗೆ ರಾಶಿ ರಾಶಿ ಎತ್ತರ ಹಿಮ್ಮಡದ ಚಪ್ಪಲಿಗಳ ಬಹುಮಾನ. ಸೋತರೆ? ಮೆಟ್ಟಿಕೊಂಡ ಚಪ್ಪಲಿಯನ್ನೂ ಕಳಚಿಟ್ಟು ಹೋಗುವ ಅವಮಾನ!



ಮದುವೆಯಾಗುವುದಾಗಿ ನಂಬಿಸಿ ಕೈಕೊಡುವ ದ.ಕೊರಿಯಾದ ಪುರುಷರಿಗೆ ಇನ್ನು ಮುಂದೆ ಜೈಲಿನ ಕಂಬಿ ಎಣಿಸುವ ಕೆಲಸ ಇಲ್ಲವಂತೆ. ಮಹಿಳೆಯರೂ ಬೇಕಿದ್ದರೆ ಪುರುಷರ ಮೇಲೆ ಇದೇ ಪ್ರಯೋಗವನ್ನು ಮಾಡಲಿ ಎಂದು ಕೋರ್ಟ್ ಹೇಳಿದೆಯಂತೆ. ಮಹಿಳಾ ಸಮಾನತೆ ಅಂದರೆ ಇದಪ್ಪಾ..



ಶ್ವೇತಭವನದ ಅಧಿಕಾರಿಗಳು ಮುಖಕ್ಕೆ ಕಪ್ಪು ಮಸಿ ಬಳಿದುಕೊಂಡಂತೆ ಮಾಡಿದ ಈ ದಂಪತಿ ಭಾರತದ ಪ್ರಧಾನಿಗೆ ಒಬಾಮ ನೀಡಿದ ಔತಣಕೂಟಕ್ಕೆ ಜೋಶಾಗಿ ತೆರಳಿದ ರೀತಿ ನೋಡಿ. ಆಹ್ವಾನ ಇಲ್ಲದಿದ್ದರೂ ಬಂದು ಒಬಾಮ ಕೈ ಕುಲುಕಿದರು. ಭದ್ರತೆ ಲೋಪದಿಂದಾಗಿ ಅಧಿಕಾರಿಗಳು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ.

ದೆಹಲಿ ಪಾಲಿಕೆ 12,7094 ಮಂದಿ ನೌಕರರಿಗೆ ಸಂಬಳ ನೀಡುತ್ತಿದ್ದುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಿತ್ತು. ಆದರೆ ಇವರಲ್ಲಿ 23 ಸಾವಿರ ನೌಕರರು ಹೆಸರನ್ನಷ್ಟೇ ಹೊತ್ತ ದೇಹವಿಲ್ಲದ ಮಂದಿ. ಈಗ ಮೇಯರ್ ಕನ್ವರ್ ಈ ವಂಚನೆ ವಿಚಾರಣೆ ನಡೆಸಲು ಇನ್ನಷ್ಟು ಮಂದಿಯನ್ನು ನೇಮಿಸಿ ಕೊಳ್ಳಲಿದ್ದಾರಂತೆ. ಇಷ್ಟು ವರ್ಷ ಕೆಲಸ ಮಾಡದೆ ಹಣ ಹೊಡೆದವರಿಗೆ ಈಗ ಮತ್ತೆ ಹೊಸ ಹೆಸರಿನ ಹುಡುಕಾಟದ ಕೆಲಸ.



ಅಂತರರಾಷ್ಟ್ರೀಯ ಚಿತ್ರ ನಿರ್ದೇಶಕ ರೋಮನ್ ಪೋಲನ್‌ಸ್ಕಿ ಕಾಲಿಗೆ ಗೆಜ್ಜೆ (ಎಲೆಕ್ಟ್ರಾನಿಕ್ ಮಾನಿಟರ್) ಕಟ್ಟಿದ್ದು ಸ್ವಿಜರ್ಲೆಂಡ್ ಪೊಲೀಸರು. ಬಾಲಕಿಯ ಅತ್ಯಾಚಾರ ಆರೋಪವಿರುವ ಈತ ಕೊನೆಗೆ ಶೌಚಾಲಯಕ್ಕೆ ಹೋದರೂ ಪೊಲೀಸರು ಟ್ರ್ಯಾಕ್ ಮಾಡುತ್ತಿದ್ದರು. ಜೈಲಾದರೂ ಸರಿ ಎನ್ನುವ ಮಟ್ಟಕ್ಕೆ ಬಂದಿದ್ದ ಈತ ಈಗ ಲಕ್ಷಾಂತರ ಡಾಲರ್ ಜಾಮೀನು ಹಣ ಸುರಿದು ಕಾಲಿಗೆ ಮುಕ್ತಿ ಕೊಡಿಸಿದ್ದಾನೆ.

ಜಪಾನ್ ಪೊಲೀಸ್ ಇಲಾಖೆ ಎತ್ತರ ಹಿಮ್ಮಡದ ಚಪ್ಪಲಿ, ಸ್ಕರ್ಟ್, ಲಿಪ್‌ಸ್ಟಿಕ್, ವಿಗ್, ಆಕರ್ಷಕ ಕೈಚೀಲಗಳ ಖರೀದಿಯಲ್ಲಿ ತೊಡಗಿದೆ. ಮಹಿಳಾ ಪೊಲೀಸರನ್ನು ಅಂದಗೊಳಿಸಲಿಕ್ಕಾ? ಅಲ್ಲ, ಮಹಿಳೆಯರ ಬ್ಯಾಗ್ ಕದಿಯುವವರನ್ನು ಪತ್ತೆ ಮಾಡಲಿಕ್ಕೆ ಚೆಂದದ ಯುವ ಪುರುಷ ಪೊಲೀಸರೇ ಹುಡುಗಿಯರ ವೇಷ ಧರಿಸಿ ಅಖಾಡಾಗೆ ಇಳಿದಿದ್ದಾರಂತೆ. ಈವರೆಗೆ ಒಂದೂ ಕಳವಿನ ಪ್ರಕರಣ ಪತ್ತೆಯಾಗಿಲ್ಲ. ಆದರೆ ವೇಷ ಧರಿಸಿದವರಿಗೆ ಪುರುಷರಿಂದ 'ಡೇಟಿಂಗ್' ಆಹ್ವಾನ ಬರುತ್ತಿದೆಯಂತೆ.

ಮ್ಯಾಡ್ರಿಡ್‌ನ ಈ ವ್ಯಾಪಾರಿ ಹುಲುಸಾದ ಬೆಳೆ ಮಧ್ಯೆ ಹೇಗೆ ಕ್ಯಾಮೆರಾಗೆ ಭಂಗಿ ನೀಡಿದ್ದಾನೆ ನೋಡಿ. ಆದರಿದು ಮಣ್ಣಿನ ಬದಲು ಮಹಿಳೆಯರ ತಲೆ ಮೇಲೆ ಬೆಳೆದ ಬೆಳೆ. ಮ್ಯಾಡ್ರಿಡ್‌ನಲ್ಲಿ ಆರ್ಥಿಕ ಮುಗ್ಗಟ್ಟಂತೆ. ಅದಕ್ಕೇ ಹೆಂಗಸರು ಕೂದಲಿನ ಸುಗ್ಗಿ ಮಾಡಿದ್ದಾರೆ.

